Regd No BG 155 29-10-1969

SATYAVADI Daily, MYSORE 4 53 rd Year of Publication

ಮೈಸೂರಿನಲ್ಲಿ ಸತ್ಯವಾದಿ ಮಹೋತ್ಸವ ನಡೆಸಿಕೊಟ್ಟ ಪತ್ರಿಕೆ

ಸತ್ಯವಾದಿ

Golden Jubilee Celebrated Paper

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

❁ ಮೈಸೂರು ನಗರದಲ್ಲಿ ಸೈಕಲ್ ಕಂದಾಯ ರದ್ದಾಗಲಿಲ್ಲ ❁

ಸಂಯುಕ್ತ ರಂಗ ಜನತೆಗಿತ್ತಿದ್ದ ಆಶ್ವಾಸನೆ ವಿಫಲ -

ವಿಚಿತ್ರ ಆಜ್ಞೆ

ಕಾರವಾರ— ದಸರಾ ಮತ್ತು ದೀಪಾವಳಿ ರಜೆ ಮುಗಿಯುವುದಕ್ಕೆ ಮೂರು ದಿನಗಳಿಗೆ ಮುಂಚಯೇ ಸ್ಕೂಲುಗಳನ್ನು ಪುರ್ತಿಗೆಯಲು ವಿದ್ಯಾಭ್ಯಾಸ ಇಲಾಖೆಯ ಏಕಾಏಕಿ ಆಜ್ಞೆಯು ಹೆಡ್‌ಮಾಸ್ಟರುಗಳಿಗೆ ಹಿಂಗುಬಡಿದಂತಾಗಿದೆ.

○

ಅವಿಶ್ವಾಸ

ಬೊಂಬಾಯಿ— ಥಾಣಾ ಪೌರಸಭೆಯು ಅದರ ಅಧ್ಯಕ್ಷ ಶ್ರೀ ಕೋಲಿ (ಕಾಂಗ್ರೆಸ್) ಉಪಾಧ್ಯಕ್ಷ ಶ್ರೀ ಜೋಷಿ (ಜನಸಂಘ) ವಿರುದ್ಧ ಅವಿಶ್ವಾಸ ಠರಾವನ್ನು 22–6 ಮತಗಳಿಂದ ಮಂಜೂರ್ಮಾಡಿತು.

★

ಮತಾಂತರ

ಇಂಫಾಲ್— ಖಾಜೋಬೆಟ್ಟಗ ದೇವಾಗಿರಿ ಭಾಗದಲ್ಲಿ 400 ಚಕ್ಮಾ ಬೌದ್ಧರನ್ನು ಬಲಾತ್ಕಾರವಾಗಿ ಬೆದರಿಕೆಯಿಂದ ಕ್ರೈಸ್ತ ಧರ್ಮಕ್ಕೆ ಮತಾಂತರಗೊಳಿಸಲಾಯಿತು

★

ಪ್ರದರ್ಶನ

ನವದೆಹಲಿ— ಫೆರುನ್ಹಾನರ ನಿಧನಕ್ಕಾಗಿ ಖಾಲ್ಸಾ ಕಾಲೇಜಿನ 300 ವಿದ್ಯಾರ್ಥಿಗಳು ಪ್ರಧಾನಿಯವರ ನಿವಾಸದ ಮುಂದೆ ಪ್ರದರ್ಶನ ನಡೆಸಿದರು.

○

ಫೆರುನ್ಹಾ ಶವಸಂಸ್ಕಾರ

ಫೆರುನ್ಹಾ (ಪಂಜಾಬು)— ಹುತಾತ್ಮ ದಶರನಸಿಂಗ್‌ರ ಶವಸಂಸ್ಕಾರವು ರಾಜ್ಯ ಗೌರವಗಳೊಡನೆ ನೆರವೇರಿತು – ಅಲ್ಲಿಗೆ ಬಂದ ಮುಖ್ಯ ಮಂತ್ರಿ ಗುರುನಾಂ ಸಿಂಗರ ಮೇಲೆ ಜನರು ಕುಪಿತರಾಗಿ ಕಲ್ಲು ಬೀರಲು, ಅವರು ಹೊರಟುಹೋಗಬೇಕಾಯಿತು — ಫೆರುನ್ಹಾನರ ಸ್ಮರಣಾರ್ಥ ನಿನ್ನೆ ಪಂಜಾಬ್ ಆವ್ಯಂತ ಹರತಾಳ ಆಚರಿಸಲಾಯಿತು.

★

ಚಲಚಿತ್ರ ಪ್ರದರ್ಶಕರ ಸಂಘ

ಮೈಸೂರು— ಇಲ್ಲಿ ಸ್ಥಾಪಿಸಲಾಗಿರುವ ಚಲಚ್ಚಿತ್ರ ಪ್ರದರ್ಶಕರ ಸಂಘಕ್ಕೆ ಶ್ರೀ ಎಂ ಬಿ ಬಸವಯ್ಯನವರು ಅಧ್ಯಕ್ಷರು, ಶ್ರೀ ವಿ ಟಿ ರಾಮ್ಕರವರು ಮತ್ತು ಶ್ರೀ ಬಿ ಎಂ ರಾಮಮೂರ್ತಿಯವರು ಉಪಾಧ್ಯಕ್ಷರು, ಶ್ರೀ ಆರ್ ವಾಸುದೇವಮೂರ್ತಿಯವರೂ ಶ್ರೀ ಆರ್ ನಾರಾಯಣ ಸ್ವಾಮಿಯವರೂ ಕಾರ್ಯದರ್ಶಿಗಳು, ಶ್ರೀ ಎಂ ಸಿ ತಿಮ್ಮಯ್ಯನವರು ಖಜಾಂಚಿ.

★

ವಿರುದ್ಧ ಪಕ್ಷದವರ ವಿರುದ್ಧ ಕಾರ್ಯ

ಕಲ್ಕತ್ತಾ— ಸಿ ಪಿ ಐ ಜೆಂಬಲಿಗರೆಂದು ಹೇಳಲಾದ 1000 ಮಂದಿ ತಮ್ಮ ಜರುದ್ಧ ರಾಜಕೀಯ ಪಕ್ಷದವರ ಮನೆಗಳ ಮೇಲೆ ಬಾರಾಸಿಪುರ ಪೋಲೀಸು ಸ್ಟೇಷನ್ನಿಗೆ ಸೇರಿದ ಒಂದು ಗ್ರಾಮದಲ್ಲಿ ಧಾಳಿ ನಡೆಸಿ ಲೂಟಿಮಾಡಿ, 38 ಮನೆಗಳನ್ನು ಡ್ಯಾಮೇಜು ಮಾಡಿದರು.

ಕಾಂಗ್ರೆಸ್ ಅಧ್ಯಕ್ಷರ ಬದಲಾವಣೆಯೆ

ನವದೆಹಲಿ—ಶ್ರೀ ನಿಜಲಿಂಗಪ್ಪನವರು ಕಾಂಗ್ರೆಸ್ ಅಧ್ಯಕ್ಷತೆ ಪದವಿಯಿಂದ ಕೆಳಗಿಳಿದು, ಜೇರೆ ಅಧ್ಯಕ್ಷರ ಚುನಾವಣೆಗೆ ಸ್ವಯಂ ಅವಕಾಶ ಕಲ್ಪಿಸದಿದ್ದರೆ, ನವೆಂಬರ್ 1 ರಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಮುಖಾಮುಖಿ ತಪ್ಪುವಂತಿಲ್ಲವೆಂದು, ಇಲ್ಲಿ ನಾಯಕರೊಡನೆ ಮೈಸೂರು ಮುಖ್ಯ ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ನಡೆಸಿದ ಮಾತುಕತೆಯಿಂದ ವ್ಯಕ್ತವಾಗಿದೆಯೆಂದು ಹೇಳಲಾಗಿದೆ.

★

ಗಲಭೆ ಪರಿಣಾಮ

ಕಲ್ಕತ್ತಾ— ಜಗರೇಡಾಲಿನ ಶಾಂತಿ ಭಂಗ ಕೈಗಾರಿಕಾ ಭಾಗದಲ್ಲಿ 14 ಗಂಟೆ ಕರ್ಫ್ಯೂ ಜಾರಿಮಾಡಲಾದೆ – 780 ಮಂದಿ ಪತ್ತಗಿರಿ ಮಾಡಲ್ಪಟ್ಟಿರುವರು.

★

ಹರಿಜನ ಹುಡುಗನ ಬಲಿ

ಹೈದರಾಬಾದು— ನರಬಲಿಯಿಂದ ತನಗೆ ಅಪಾರ ಹಣ ದೊರೆಯುವುದೆಂದು ಒಬ್ಬ ಜೋತಿಷ್ಕನು ತಿಳಿಸಿದಂತೆ, ಚಿಂಗೋಳಿ ಗ್ರಾಮದ ಒಬ್ಬನು ಎಲ್ಲಪ್ಪನೆಂಬ ಹರಿಜನ ಹುಡುಗನನ್ನು ದೀಪರಿಗೆ 2 ತಿಂಗಳ ಹಿಂದೆ ಬಲಿಕೊಟ್ಟಿದ್ದು ಹೊರಪಟ್ಟಿದೆ.

●

ಇಂಡೋರು— ಭಾರತ ಗೃಹಮಂತ್ರಿ ಶ್ರೀ ಚವ್ಹರ ಕಾರನ್ನು ಅಡ್ಡಕಟ್ಟಿದ ಎಸ್ಸೆಸ್ಪಿ ಸ್ವಯಂಸೇವಕರಿಗೂ ಪೋಲೀಸರಿಗೂ ಆದ ಹೊಡೆದಾಟದಲ್ಲಿ ಗಾಯಗೊಂಡ 20 ಮಂದಿಯ ಪೋಲೀಸರು 12 ಮಂದಿ.

ಮೈಸೂರಿನಲ್ಲಿ ಸೈಕಲ್ ತೆರಿಗೆ

ಮೈಸೂರು ಪೌರಸಭೆಯ ಚುನಾವಣೆ ಕಾಲದಲ್ಲಿ ಸಂಯುಕ್ತ ರಂಗ, ಸೈಕಲ್ ತೆರಿಗೆ ರದ್ದುಪಡಿಸುವದಾಗಿ ಜನತೆಗೆ ಆಶ್ವಾಸನ ನೀಡಿತ್ತಷ್ಟೆ. ತೆರಿಗೆ ರದ್ದಾಗಿಲ್ಲದೆ ಲೈಸೆನ್ಸು ತೆಗೆದುಕೊಳ್ಳದವರ ಮೇಲೆ ಕ್ರಮ ಕೈಗೊಳ್ಳುವುದಾಗಿ ಪುರಸಭೆ ಕಮಿಷನರು ತಿಳಿಸಿರುತ್ತಾರೆ.

●

ಏನು ರಹಸ್ಯವೋ

ಬೆಂಗಳೂರು— ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರವರಿಗೂ ಪ್ರಧಾನಿಯವರಿಗೂ ಡೆಲ್ಲಿಯಲ್ಲಿ ನಡೆದ ಮಾತುಕತೆ ವಿಷಯ ಹೆವರಪಟ್ಟಿಲ್ಲ – ಪಾಟೀಲರವರು ಶ್ರೀ ನಿಜಲಿಂಗಪ್ಪನವರೊಡನೆ ಅರ್ಧ ಗಂಟೆ ರಹಸ್ಯ ಮಾತುಕತೆ ನಡೆಸಿದರೆಂದು ಗೊತ್ತಾಗಿದೆ.

●

ರೈಲಿನಲ್ಲಿ ದರೋಡೆ

ಮಧುರೈ— ಪ್ರಾಣಾಪಾಯ ಆಯುಧಗಳೊಡನೆ ಮುಖವಾಡ ಧರಿಸಿದ ಇಬ್ಬರು ಮಣಿಯಾಚಿ ಹತ್ತಿರ ಸೋಮವಾರ ರಾತ್ರಿ ಪ್ರಯಾಣೀಕರ ರೈಲು ಹತ್ತಿ, ಮಹಿಳೆಯರ ಕಂಪಾರ್ಟುಮೆಂಟಿಗೆ ನುಗ್ಗಿ, ಅಲ್ಲಿದ್ದವರಿಗೆ ಪ್ರಾಣಭಯ ಉಂಟುಮಾಡಿ ರೂ. 92000 ಹಣ ಮತ್ತು ಆಭರಣ ದೋಚಿಕೊಂಡು ಪರಾರಿಯಾದರು.

○ ಕೋಲಾರ— ಮೂಕಾಂಬಿಕಾ ದೇವಾಲಯಕ್ಕೆ ತಿರುವಾಂಕೂರು ಮಹಾರಾಜ ಮಹಾರಾಣಿಯವರು ಭೇಟಿಕೊಟ್ಟು, ತಾ || 24 ಮತ್ತು 25 ರಂದು ಪೂಜೆ ನೆರವೇರಿಸಿದರು.

"Bank Road Bahusar – A Fair Price Shop in Actual Practice"

ಅಂತರಜಾತಿ ವಿವಾಹಗಳಿಗೆ ಬೋನಸ್

ಪಂಜಾಬು ಸರಕಾರವು ಹಿಂದುಳಿದ, ಬುಡಕಟ್ಟು ಜನಾಂಗದ ಅಂತರ್ಜಾತಿ ವಿವಾಹಕ್ಕೆ ರೂ. 1000 ಬಹುಮಾನ ಕೊಡಲು ಪಂಜಾಬು ಸರಕಾರ ನಿರ್ಧರಿಸಿದೆ. ವಿವಾಹವು ವಧುವರರ ತಂದೆತಾಯಿಗಳ ಸಮ್ಮತಿಯಿಂದ ಆದರೇ ಈ ಬಹುಮಾನ. ಈ ಕಾರ್ಯಕ್ಕಾಗಿ ಸರಕಾರ ರೂ. 3 ಲಕ್ಷ ನಿಗದಿ ಮಾಡಿದೆ. ಮೂರು ವರ್ಷಗಳ ಪರೀಕ್ಷಾನಂತರ ಸರಕಾರವು ಎಲ್ಲಾ ಅಂತರಜಾತಿ ವಿವಾಹಗಳಿಗೂ ಈ ಸೌಲಭ್ಯ ವ್ಯಾಪಕಗೊಳಿಸಲು ಯೋಜಿಸಿದೆ.

§ ನಾವು ರಾಮರಾಜ್ಯದಲ್ಲಿ ವಾಸಿಸುತ್ತಿರುವೆವು ಎಂಬುದರಲ್ಲಿ ಏನೂ ಸಂಶಯವಿಲ್ಲ. ಕೋಮುವಾರು ವೈಶಮ್ಯವಿಲ್ಲ, ವಿದ್ಯಾರ್ಥಿಗಳಲ್ಲಿ ಶಿಸ್ತು ಪರಿಪೂರ್ಣದ ಹತ್ತಿರವಿದೆ, ನಿರುದ್ಯೋಗವಿಲ್ಲದ್ದರಿಂದ ಎಲ್ಲರೂ ಸೌಖ್ಯವಾಗಿದ್ದಾರೆ, ಖಜಾನೆಯಲ್ಲಿ ಹಣ ತುಂಬಿತುಳುಕುತ್ತಿದೆ, ಸರಕಾರ ಹಣ ಖರ್ಚು ಮಾಡುವುದಕ್ಕೆ ಜಾತಿನಿಯೆಮಗಳನ್ನು ಮುರಿಯಲಿವುದೇ ಅತ್ಯುತ್ತಮ ಮಾರ್ಗವೆಂದು ನಿಧರಿಸಿದೆ ! ಎಂತಹ ಅಗಾಧ ಮತ್ತು ಘನವಾದ ಉದ್ದೇಶ ; ನಾವು ಸಂತೋಷದಿಂದ " ಇಕ್ವಿಲಾಬ್ ಜಿಂದಾಬಾದ್ " ಎಂದು ಮಾತ್ರ ಕೂಗಿಕ್ಕೊಳ್ಳಬಲ್ಲೆವು. (ಟ್ರೂತ್)

ಮನನಾರ್ಹ ವಿಷಯ

ಮನುಷ್ಯನು ವಿಶೇಷವಾಗಿ ಮಾಡಿದುದನ್ನು ಮಾಡಿಸಲಾರದವನೂ, ಹಿಡಿದುದನ್ನು ಮುಗಿಸಲಾರದವನೂ ಆಗಿದ್ದಾನೆ. ಅಪಾರ ಮಹಿಮಾಕರವಾದ ದಿವ್ಯಪದವಿಯನ್ನು ಅಪೇಕ್ಷಿಸುವವನು ಮೊದಲು ಹೊನ್ನು ಹೆಣ್ಣುಗಳೆಂಬ ಎರಡು ಪರೀಕ್ಷಾ ಸ್ಥಳಗಳಲ್ಲಿ ಬೀಳದೆ ದಾಟಬೇಕಾಗಿದೆ. (ಕಣ್ದೆರೆ)

ಅಖಿಲ ಭಾರತದಲ್ಲಿ ಕೂಡಲೇ

ಗೋವಧೆ ನಿಷೇಧವಾಗಲಿ

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ

ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ

ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ

ಸ್ಥಳದಲ್ಲಿ ಚಂದಾ ತ್ರೈಂಗಳಿಗೆ 40 ಪೈಸೆ; ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00

ಸೋಮವಾರ ಸಂಚಿಕೆ ವರ್ಷಕ್ಕೆ ರೂ 2

ದೇಶದ ಹಿತಕಾಗಿ

ಕುಟುಂಬ ಯೋಜನೆ

SHAKTI SUDHA

A Superb Tonic

ವುಡ್‌ಲಾಂಡ್ ಜಯಪ್ರದ 3ನೇ ವಾರ

ಅಮೋಘ ಪ್ರಾರಂಭ

— ಮನಮೋಹಕ ಹಿಂದಿ ಚಿತ್ರ — ಈಸ್ಟ್‌ಮೆನ್ ಕಲರ್ —

ಹಸೀನಾ ಮಾನ್ ಜಾಯೇಗಿ

ಶಶಿಕಪೂರ್ ಬಬೀತಾ ಜಾನಿವಾಕರ್

ಸಂಗೀತ : ಕಲ್ಯಾಣಜಿ ಆನಂದಜಿ

[ದಿನ 3 ಪ್ರದರ್ಶನಗಳು]

ಅಪೆರಾ — ತಾ.24-10-69 ರಿಂದ

.... ಅತ್ಯಮೋಘ ತಮಿಳು ಚಿತ್ರ ....

ತುಣ್ಡೈವನ್

ಪಾತ್ರ— ಎ ವಿ ಎಂ ರಾಜನ್, ಸಾಹುಕಾರ್ ಜಾನಕಿ, ಸುಂದರ್, ನಾಗೇಶ್

ನಿರ್ದೇಶನ : ಎಂ ಎಂ ತಿರುಮಂಗಂ

ದಿನ 3 ಆಟಗಳು

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಿಗಾಗಿ ನಡೆಯಲಿ

ಗೋರಕ್ಷಣೆಗೆ ಬೆಂಬಲ ನೀಡಿ

Protect the Cow

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 6